ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ
ಸರ್ವ ಶಿಕ್ಷಣ ಅಭಿಯಾನ–ಕರ್ನಾಟಕ, ರಾಜ್ಯ ಯೋಜನಾ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಸಶಿಅ/ಗುಣಮಟ್ಟ/ಎಂ.ಪ್ರಿ/02/2013–14

ದಿನಾಂಕ: 22.07.2016

ವಿಷಯ: "ಸ್ವಚ್ಛ ಪಖ್ವಾಡಾ ಅಜೆಂಡಾ ಕುರಿತು".

ಉಲ್ಲೇಖ: 1) EMPRI/NGC/CR-1/COR-SPD/2016-17/184, ದಿನಾಂಕ:16.06.2016.

2) ಶ್ರೀ.ಲಲಿತ ಕಪೂರ, Advisory, EE division, MoEF & CC ರವರ ಪತ್ರ ಸಂಖ್ಯೆ: F.No. 8-6/2016-EE, (Part-1) dated on 06.06.2016.

%%%%%%%%%%%%

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದನ್ವಯ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು, "ರಾಷ್ಟ್ರೀಯ ಹಸಿರು ಪಡೆ" (NGC-national green corps) ಕಾರ್ಯಕ್ರಮದಡಿಯಲ್ಲಿ "ಸ್ವಚ್ಛ ಭಾರತ್" ಚಟುವಟಿಕೆಗಳು, ಜಲಸಂರಕ್ಷಣಾ ಅಭಿಯಾನ ಮತ್ತು ಸಸಿ ನೆಡುವ ಚಟುವಟಿಕೆಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

"ಅಂತರಾಷ್ಟ್ರೀಯ ಯುವ ದಿನಾಚರಣೆ" ಅಂಗವಾಗಿ (ಆಗಸ್ಟ್, 12ರಂದು) ಭಾರತ ಸರ್ಕಾರವು ದಿನಾಂಕ:01.08.2016 ರಿಂದ 15.08.2016 ರವರೆಗೆ (15 ದಿನಗಳ ಅವಧಿ) ಶಾಲಾ ಹಂತದಲ್ಲಿ ಈ ಕೆಳಕಂಡ "All NSS, NCC & Eco clubs" themes ನ್ನು ಒಳಗೊಂಡ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸೂಚಿಸಿದೆ.

1. ಯುವ ಸ್ವಯಂ ಸೇವಕರು ನಾಗರಿಕರಿಗೆ ಮತ್ತು ಕೊಳಗೇರಿ ನಿವಾಸಿಗಳಿಗೆ ಸುರಕ್ಷಿತ ನೈರ್ಮಲ್ಯ ಅಭ್ಯಾಸಗಳ ಬಗ್ಗೆ ಸಂವೇದನೆಯನ್ನು ಉಂಟು ಮಾಡುವುದು.
2. ಎಲ್ಲಾ ಯುವ ಗುಂಪುಗಳು Mygov.in ನಲ್ಲಿರುವ ಸ್ವಚ್ಛ ಭಾರತದ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದು (ಪ್ರತಿಜ್ಞೆಯ ಪ್ರತಿಯನ್ನು ಲಗತ್ತಿಸಿದೆ) ಮತ್ತು ನಗರ/ಗ್ರಾಮಗಳ ವಿವಿಧ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡು ಅವುಗಳ ಫೋಟೋಗಳನ್ನು swachhbharat.mygov.in ಅಪಲೋಡ್ ಮಾಡುವುದು.

## ಶಾಲಾ ಹಂತದಲ್ಲಿ ಇಕೋ ಕ್ಲಬ್‌ನಡಿ ಹಮ್ಮಿಕೊಳ್ಳಬೇಕಾದ ಚಟುವಟಿಕೆಗಳು:-

1. ಶಾಲಾ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳಲು ಸ್ವಚ್ಛತಾ ಆಂದೋಲನವನ್ನು ಹಮ್ಮಿಕೊಳ್ಳುವುದು.
2. ಜುಲೈ- ಆಗಸ್ಟ್ ತಿಂಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಸಿಗಳನ್ನು ನೆಡುವುದು.
3. ಶಾಲೆಗಳಲ್ಲಿನ ಕಸವನ್ನು ಒಣಕಸ, ಹಸಿಕಸವೆಂದು ಪ್ರತ್ಯೇಕಿಸಿ ಬೇರೆ ಬೇರೆ ಗುಂಡಿಗಳಲ್ಲಿ ಹಾಕಿ, ಗೊಬ್ಬರವಾಗಿ ತಯಾರಿಸುವುದು ಹಾಗೂ ಅದನ್ನು ಶಾಲಾ ಕೈತೋಟಕ್ಕಾಗಿ ಬಳಸುವುದು.
4. ಶಾಲಾ ಆವರಣದಲ್ಲಿ ಮಳೆನೀರಿನ ಸಂಗ್ರಹಣೆಗಾಗಿ ಮಳೆಕೊಯ್ಲು ನಿರ್ಮಿಸುವುದು ಹಾಗೂ ಶಾಲಾ ಆವರಣದಲ್ಲಿ ಮಳೆನೀರು ನಿಂತು ಸೊಳ್ಳೆಗಳು ಉತ್ಪತ್ತಿಯಾಗದಂತೆ ನೋಡಿಕೊಳ್ಳುವುದು.
5. ವಿದ್ಯಾರ್ಥಿಗಳಿಗೆ ಕಾಗದದ ಮರುಬಳಕೆಯನ್ನು ಅಭ್ಯಾಸ ಮಾಡಿಸುವುದು.
6. ಶಾಲಾ ಆವರಣದಲ್ಲಿರುವ ಕೊಳಕು/ಅಸ್ವಚ್ಛತಾ ಭಾಗಗಳನ್ನು ಶುಚಿಗೊಳಿಸುವುದು.

7. ಶಾಲಾ ಆವರಣ ಹಾಗೂ ಹೊರಗಿನ ಸ್ಥಳಗಳಲ್ಲಿ ಬೀದಿ ನಾಟಕಗಳ ಮೂಲಕ ಪಾರ್ಕ್‌ಗಳನ್ನು ಹಾಗೂ ಉದ್ಯಾನವನಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಪೋಷಕರಿಗೆ, ಶಿಕ್ಷಕರಿಗೆ ಮತ್ತು RWA's (Resident Welfare Association) ರವರಿಗೆ ಅರಿವು ಮೂಡಿಸುವುದು.
8. ಅನಧಿಕೃತ ಸ್ಥಳಗಳಲ್ಲಿ ಆಸ್ಪತ್ರೆಯ ಅಸುರಕ್ಷಿತ, ಅನುಪಯುಕ್ತ ತ್ಯಾಜ್ಯವನ್ನು ಹಾಕಿ ಪರಿಸರಕ್ಕೆ ಹಾನಿಯುಂಟು ಮಾಡುವವರ ವಿರುದ್ಧ ಕೂಡಲೇ ಕ್ರಮಗಳನ್ನು ಕೈಗೊಳ್ಳುವುದು.
9. ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಆ ವಾತಾವರಣದಿಂದುಂಟಾಗುವ ರೋಗಗಳ ಬಗ್ಗೆ ಮಾಹಿತಿ ನೀಡುವುದು.
10. ಪ್ಲಾಸ್ಟಿಕ್ ವಸ್ತುಗಳು ಮತ್ತು ಮರದ ಎಲೆಗಳನ್ನು ಸುಡದೇ ಪ್ರತ್ಯೇಕವಾಗಿ ಸಂಗ್ರಹಿಸಿ ವಿಲೇವಾರಿ ಮಾಡುವುದು.

ಈ ಮೇಲಿನ ಚಟುವಟಿಕೆಗಳನ್ನು ಶಾಲಾ ಹಂತದಲ್ಲಿ ಹಮ್ಮಿಕೊಂಡ ಬಗ್ಗೆ ಮಾಹಿತಿಯನ್ನು ಜಿಲ್ಲಾ ಹಂತದಲ್ಲಿ ಕ್ರೋಢಿಕರಿಸಿ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ EMPRI ಸಂಸ್ಥೆ ಮತ್ತು ರಾಜ್ಯ ಕಛೇರಿಗೆ ಪ್ರತಿಗಳನ್ನು ದಿನಾಂಕ:22.08.2016 ರೊಳಗೆ ಕಡ್ಡಾಯವಾಗಿ ಕಳುಹಿಸುವುದು.

ತಮ್ಮ ವಿಶ್ವಾಸಿ

ನಿರ್ದೇಶಕರು(ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ
ಬೆಂಗಳೂರು

<u>ಪ್ರತಿಗಳು ಅಗತ್ಯ ಕ್ರಮಕ್ಕಾಗಿ:</u>

1. ಜಿಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಜಿಲ್ಲಾ ಉಪಸಮನ್ವಯಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ. ಬೆಂಗಳೂರು(ಉ), ಬೆಂಗಳೂರು(ದ), ಬೆಂಗಳೂರು(ಗ್ರಾ), ಬಳ್ಳಾರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಧಾರವಾಡ, ಗದಗ, ಕೊಡಗು, ಕೋಲಾರ, ಕೊಪ್ಪಳ, ರಾಮನಗರ, ರಾಯಚೂರು, ಮಧುಗಿರಿ, ಉಡುಪಿ, ಉತ್ತರಕನ್ನಡ, ಶಿರಸಿ, ಯಾದಗಿರಿ. ಇವರ ಮೂಲಕ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಶಾಲಾ ಮುಖ್ಯಶಿಕ್ಷಕರಿಗೆ.
2. ಜಿಲ್ಲಾ ಉಪನಿರ್ದೇಶಕರು(ಅಭಿವೃದ್ಧಿ), ಡಯಟ್ ಕಛೇರಿ ಬೆಂಗಳೂರು(ಉ), ಬೆಂಗಳೂರು(ದ), ಬೆಂಗಳೂರು(ಗ್ರಾ), ಬಳ್ಳಾರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಧಾರವಾಡ, ಗದಗ, ಕೊಡಗು, ಕೋಲಾರ, ಕೊಪ್ಪಳ, ರಾಮನಗರ, ರಾಯಚೂರು, ಮಧುಗಿರಿ, ಉಡುಪಿ, ಉತ್ತರಕನ್ನಡ, ಶಿರಸಿ, ಯಾದಗಿರಿ ಜಿಲ್ಲೆಗಳು.

<u>ಪ್ರತಿಗಳು:</u>

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು-01ರವರ ಆಪ್ತಶಾಖೆಗೆ ಮಾನ್ಯರ ಅವಗಾಹನೆಗೆ ತರಲು ಕೋರಿದೆ.
2. ಮಹಾನಿರ್ದೇಶಕರು, ಹಸಿರು ಭವನ, ದೊರೆಸಾನಿಪಾಳ್ಯ ಕ್ಯಾಂಪಸ್, ವಿನಾಯಕನಗರ ವೃತ್ತ, ಜೆ.ಪಿನಗರ, 5ನೇ ಫೇಸ್, ಬೆಂಗಳೂರು-560078
3. ಕಛೇರಿ ಪ್ರತಿ.